# ದಿವ್ಯತ್ರಯರ ಸಂದೇಶಗಳಿಂದ ನನ್ನ ಜೀವನದ ನನ್ನ ಮೇಲೆ ಆಗಿರುವ ಪ್ರಭಾವ

ಕೆ.ವಿ.ಭಾರತಿ
ಕಗ್ಗುಂಡಿ, ಹುಮಚದ ಕಟ್ಟೆ

೧೯೭೦ರಲ್ಲಿ ನಾನು ಹತ್ತನೆಯ ತರಗತಿಯಲ್ಲಿದ್ದಾಗಲೇ 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ವೆಂಬ ಪುಸ್ತಕವನ್ನು ಓದಿದ್ದೆ. ನನ್ನ ಪ್ರೀತಿಯ ಗೆಳತಿ ವೃಂದಳ ಚಿಕ್ಕಮ್ಮನ ಮನೆಯಲ್ಲಿದ್ದ ಈ ಪುಸ್ತಕ ಆಗಲೇ ಜೀರ್ಣಾವಸ್ಥೆಯಲ್ಲಿತ್ತು. ಅದನ್ನು ಅವಳ ಒತ್ತಾಯಕ್ಕೆ ಕಟ್ಟುಬಿದ್ದು ಮನೆಯವರು ನನಗೆ ಕೊಟ್ಟಿದ್ದರು. 'ಉದಾಸೀನದಿಂದ ಹರಿಯಬಾರದು, ಬಿಸಾಡಬಾರದು. ಓದಿದ ಕೂಡಲೆ ತಂದು ಕೊಡು' ಎಂದು ಹೇಳಿ ಕೊಟ್ಟಿದ್ದರು. ಆ ಪುಸ್ತಕದಲ್ಲಿದ್ದ ವಿಚಾರಗಳಿಗಿಂತಲೂ, ಹಾಡುಗಳು ನನ್ನನ್ನು ಆಕರ್ಷಿಸಿದ್ದವು. ಬಾಲ್ಯ-ಯೌವನದ ಸಂಕ್ರಮಣ ಘಟ್ಟದಲ್ಲಿದ್ದ ನನ್ನನ್ನು ಆ ಪುಸ್ತಕ ಒಂದು ಹೊಸ ಅಪರಿಚಿತ ಲೋಕಕ್ಕೆ ಪಾದಾರ್ಪಣೆ ಮಾಡಿಸಿತ್ತು. ಆತ್ಮ-ಪರಮಾತ್ಮ, ಜ್ಞಾನ-ಅಜ್ಞಾನ, ಧ್ಯಾನ, ಭಜನೆ, ಬ್ರಹ್ಮಜ್ಞಾನ, ಪಾಪ-ಪುಣ್ಯ, ನಿಷ್ಕಲ್ಮಷ ಪ್ರೀತಿ, ಪರಿಶುದ್ಧ ಪ್ರೇಮ, ಭಕ್ತಿ, ತ್ಯಾಗ-ವೈರಾಗ್ಯ ಇತ್ಯಾದಿ ಹೊಸ ಪ್ರಪಂಚದ, ಹೊಸ ಹೊಸ ಪದಗಳು ನನ್ನನ್ನು ಆಕರ್ಷಿಸಿದ್ದವು. ದೇವರ ದಯೆಯಿಂದ ಸುಸಂಸ್ಕೃತ ಪರಿವಾರದಲ್ಲಿ ಹುಟ್ಟಿದ್ದೆ. ಆದರೂ ಓದಿದ್ದರಲ್ಲಿ ಅರ್ಥವಾಗಿದ್ದು ಮತ್ತು ಅರ್ಥವಾಗದ್ದು ಸಮಸಮವಾಗಿಯೇ ಇತ್ತು.

ಮನೆಯಲ್ಲಿ ಅಮ್ಮ ಇದ್ದುದರಿಂದ ನಾನು ಮಾಡಲೇಬೇಕಾದ ಕೆಲಸಗಳಾಗಲಿ ಅಥವಾ ಮತ್ಯಾವುದೇ ತರಹದ ಜವಾಬ್ದಾರಿಯಾಗಲೀ ಇರಲಿಲ್ಲ. ಅಮ್ಮ ಮಾಡಿಕೊಟ್ಟದ್ದನ್ನು ತಿಂದುಕೊಂಡು, ಪರಮಹಂಸರ ಸ್ನೇಹಪ್ರಪಂಚದ ಸೆಳೆತಕ್ಕೆ ಸಿಲುಕಿ, ಆತ್ಮ-ಪರಮಾತ್ಮ- ಪ್ರಾಮಾಣಿಕತೆ, ಆದರ್ಶಗಳ ಗುಂಗಿನಲ್ಲಿ ಮೈಮರೆತು ನೆಮ್ಮದಿಯಿಂದಿದ್ದೆ. ಚರಾಚರಗಳಲ್ಲೂ ಪರಮಾತ್ಮ ಇದ್ದಾನೆ. ಇದನ್ನು ಅನುಭವಸಿದ್ಧ ಮಾಡಿಕೊಳ್ಳುವುದೇ ಜ್ಞಾನ. ಅದಕ್ಕಾಗಿ ಅಂತರಂಗ ಮತ್ತು ಬಹಿರಂಗದಲ್ಲಿ ನನ್ನ ನಡೆನುಡಿ ಒಂದಾಗಿರಬೇಕು ಎಂದು ಪ್ರಯತ್ನಿಸುವುದರಲ್ಲಿ ಬಹಳ ಆನಂದ ಸಿಗುತ್ತಿತ್ತು. ಆದರೆ ಎಂದೂ ಸಹ ಕುಟುಂಬ ವ್ಯವಸ್ಥೆಯನ್ನು ಅಲ್ಲಗಳೆದು ಓಡಿಹೋಗುವ ಮನಸ್ಸು ಬರಲಿಲ್ಲ. ಏಕೆಂದರೆ, ಹಸಿವು ಬಾಯಾರಿಕೆಗಳನ್ನು ಮೀರಿ ಬದುಕುವ ಧೈರ್ಯ ನನಗಿರಲಿಲ್ಲ. ಗೃಹಿಣಿಯಾಗಿ, ಸುಂದರವಾದ ವಿದ್ಯಾಸಂಸಾರದ ಒಡತಿಯಾಗಿ ಕೆಲಸ ಕಾರ್ಯಗಳನ್ನು ಮಾಡಲು ಇಚ್ಛೆಪಟ್ಟೆ.

ನನಗೆ ಎಂದೂ, ಯಾರೂ ಸಹ, ಪರಮಹಂಸರ ಉಪದೇಶದಂತೆ ನಡೆದುಕೊಳ್ಳಲು ಅಡ್ಡಿ ಮಾಡಲಿಲ್ಲ. ನಾನು ಅವರು ಆದೇಶಿಸಿದ ಆಚಾರಕ್ಕಿಂತಲೂ ಹೆಚ್ಚಾಗಿ ಅವರು ಹೇಳಿದ ವಿಚಾರಗಳಿಂದಲೇ ಆಕರ್ಷಿತಳಾಗಿದ್ದೆ. ಹಾಗಾಗಿ ಎಷ್ಟೋ ವೇಳೆ ನನಗಿಂತ ಹೆಚ್ಚು, ಇತರರಿಗೇ ಸುಖ ನೀಡಿರುವೆ. ಎಂತಹ ಪರಿಸ್ಥಿತಿಯಲ್ಲೂ ಸಹ ಮೋಸ, ವಂಚನೆ, ಕಳ್ಳತನ, ಪಂಕ್ತಿಭೇದ, ನನಗೆ ಬೇಡದ್ದನ್ನು ಬೇರೆಯವರಿಗೆ ಕೊಡುವುದು, ಇತರರಿಂದ ಕಸಿಯುವುದು – ಇವುಗಳನ್ನು ಮಾಡದೆ ಇರುವುದಕ್ಕೆ ಕಾರಣ, ನನ್ನೊಳಗೆ ಪರಮಹಂಸರ ವ್ಯಕ್ತಿತ್ವದ ಛಾಪು ಇದ್ದದ್ದೇ ಆಗಿದೆ. ಸ್ವಾರ್ಥರಹಿತವಾದ ಶುದ್ಧ ಪ್ರೀತಿಯನ್ನು ಪರಮಾತ್ಮನ ಹೊರತಾಗಿ ಅರಿಯಬಲ್ಲವರು, ಕೊಡಬಲ್ಲವರು ಯಾರೂ ಇಲ್ಲ. ಸಾಧಾರಣ ಜನ ಅದನ್ನು ಅರಿಯಲಾರರು, ಕೊಡಲಾರರು ಕೂಡ. ತಿಳುವಳಿಕೆಯಿರುವ ಸುಸಂಸ್ಕೃತ ವ್ಯಕ್ತಿಗಳು ನನ್ನನ್ನು ಇಷ್ಟಪಡಲು ಮುಖ್ಯ ಕಾರಣ, ನಿಜಕ್ಕೂ ಪರಮಹಂಸರು ತಿಳಿಸಿದ ವಿಚಾರಗಳ ಪೈಕಿ ಕೆಲವು ಭಾಗವನ್ನಾದರೂ ನಾನು ಅಳವಡಿಸಿಕೊಂಡು ಬದುಕುತ್ತಿರುವುದೇ ಆಗಿದೆ. ಮಕ್ಕಳಿಗೂ ಸಹ ನಾನು ಕಲಿತಿರುವ ವಿಚಾರಗಳನ್ನು ಹೇಳಿಕೊಟ್ಟದ್ದರಿಂದ, ಅವರೂ ವಿವೇಕಾನಂದರ, ಪರಮಹಂಸರ ಮತ್ತು ಹಿಂದೂ ಸಂಸ್ಕೃತಿಯ ಬಗ್ಗೆ ಆದರವುಳ್ಳವರೇ ಆಗಿದ್ದಾರೆ.

ಜೀವನದ ಸಂಧ್ಯಾಕಾಲದಲ್ಲಿ, ಆಗಿಹೋದದ್ದರ ಬಗ್ಗೆ ಪಶ್ಚಾತ್ತಾಪ ಪಡದೆ ಆದಷ್ಟೂ ಯಶಸ್ವಿಯಾಗಿ ಬದುಕಬೇಕಾದರೆ, ಖಂಡಿತ, ಬಡತನವಿರಲಿ-ಸಿರಿತನವಿರಲಿ, ವಿದ್ಯಾವಂತರಾಗಲಿ ಅಥವಾ ಅವಿದ್ಯಾವಂತರಾಗಲಿ ವಿನಾ ಕಾರಣ ಬೇರೆಯವರಿಗೆ ತೊಂದರೆಯಾಗದಂತೆ ಬದುಕಲು ಪ್ರಯತ್ನಿಸಬೇಕು. ಪರಮಾತ್ಮ ಅಂತಹವರಿಗೆ ನಿಶ್ಚಿತವಾಗಿ ಕೃಪೆ ತೋರುತ್ತಾನೆ. ಬಹುಶಃ ನೆಮ್ಮದಿಯಿಂದಿರಲು ಎಲ್ಲರಿಗೂ ಇದು ಅತ್ಯಾವಶ್ಯಕ. ಸಂಸಾರವು ಬಂಧನ ಅಥವಾ ಬಿಡುಗಡೆ ಆಗುವುದು ನಮ್ಮ ಆಚಾರ, ವಿಚಾರಗಳಿಂದಲೇ.

ದಿವ್ಯತ್ರಯರ ಜೀವನ ಚರಿತ್ರೆಯನ್ನು ಅರಿತಿದ್ದರಿಂದ ಆದ ಮತ್ತೊಂದು ಲಾಭವೆಂದರೆ ನನಗೆ ಸಿಗುವ ಯಾವುದೇ ವಸ್ತುವಿನ (ಹಣವಿರಲಿ, ಆಹಾರವಿರಲಿ) ಹಿಂದೆ, ಇತರರ ನೋವು-ದುಃಖ, ಕಣ್ಣೀರು ಇದೆಯೆಂದು ವಿಚಾರ ಮಾಡುವ ಅಭ್ಯಾಸ ರೂಢಿಸಿಕೊಂಡಿರುವುದು. ಈಗ ನನ್ನ ಬಳಿ ಏನೇನು ಇದೆಯೋ ಅದೆಲ್ಲದರ ಬಗ್ಗೆ ಯಾರೊಬ್ಬರೂ 'ಇದು ಮೊದಲು ನನ್ನದಾಗಿತ್ತು, ಇವಳು ಅದನ್ನು ಕಸಿದಳು, ಬೇಡಿದಳು, ಮೋಸಮಾಡಿದಳು' ಎಂದು ಬೇಸರ ಪಡುವಂತಿಲ್ಲವೆಂದು ಹೇಳಿಕೊಳ್ಳಲು ಅಭಿಮಾನವೆನಿಸುತ್ತದೆ.

ಇನ್ನೊಂದು ವಿಚಾರ ಹೇಳದಿದ್ದರೆ ತಪ್ಪಾಗುತ್ತದೆ. ಏನೆಂದರೆ ಆಧ್ಯಾತ್ಮಿಕ ಬಲವಿರುವ ಅನೇಕರು ಒಳ್ಳೆಯತನವೇ ಅತ್ಯುತ್ತಮವೆನ್ನುತ್ತಾರೆ. ಒಂದು ನಾಣ್ಯದ ಎರಡು ಮುಖಗಳಂತೆ ಒಳ್ಳೆಯತನ-ಕೆಟ್ಟತನ; ಜ್ಞಾನ-ಅಜ್ಞಾನ; ಪಾಪ-ಪುಣ್ಯ. ಈ ಸಮಾಜದಲ್ಲಿ ದ್ವಂದ್ವವಿಲ್ಲದೆ ಜೀವಿಸುವುದು ಅಸಾಧ್ಯ. ತೀರಾ ಹತಾಶರಾದಾಗ ಮಾತ್ರ ಭಗವಂತನಿಗೆ ಪ್ರಾರ್ಥನೆ ಸಲ್ಲಿಸಬೇಕು. ಅಲ್ಲಿಯತನಕ ದೇವರ ನೆನಪಿನೊಂದಿಗೆ ಆವಶ್ಯಕವೆನಿಸಿದಾಗ, ಮಕ್ಕಳನ್ನು ಪಾಲಿಸುವಾಗ ಕೋಪವನ್ನೂ ಮಾಡಬೇಕು. ಇಲ್ಲವಾದಲ್ಲಿ ನಾವು ಹೇಡಿಗಳೆನ್ನಿಸಿಕೊಳ್ಳುತ್ತೇವೆ. ನಮ್ಮನ್ನು ಜಾಣರಾದವರು ಬಲಿಪಶುಗಳನ್ನಾಗಿಸಿಬಿಡುತ್ತಾರೆ. ಶ್ರೀರಾಮಕೃಷ್ಣರು ಹೇಳುತ್ತಿದ್ದಂತೆ ನಾವು ಬುಸುಗುಟ್ಟಬೇಕು, ಕಚ್ಚಬಾರದು.